ಬೆಳಗ್ಗೆ ಎದ್ದದ್ದೇ ಮೈಮುರಿದು ಕುಂಡಿ ಎತ್ತರಿಸಿ ನಿಮಿಷ ಹೊತ್ತು ದಡ್ ದಡ್ ದಢಾಲ್ ಎಂದು ಸನಾಯಿ ಊದಿ ಅಕ್ಕಪಕ್ಕದ ಮನೆಯವರನ್ನು ಬೆಚ್ಚಿಬೀಳಿಸುವ ಪರಿಪಾಠ ಇಟ್ಟುಕೊಂಡಿರುವುದರಿಂದ ಸಿದ್ಧಪ್ಪಗೌಡನನ್ನು ಬೂದಿಹಾಳದಲ್ಲಿ ಸನಾಯಿಗೌಡ ಎಂದು ಕರೆಯುವುದು ರೂಢಿಯಾಗಿ ಆತನಿಗೆ ಸಿದ್ಧಪ್ಪ ಎಂಬ ಹೆಸರಿದೆ ಎನ್ನುವುದು ಎಷ್ಟೋ ಜನಕ್ಕೆ ಮರೆತುಹೋಗಿದೆ. ಇಂತಿಪ್ಪ ಸನಾಯಿ ಗೌಡ ಇವತ್ಯಾಕೋ ಎಂಟು ಗಂಟೆಯಾಗಲಿಕ್ಕೆ ಬಂದರೂ ಇನ್ನೂ ಎದ್ದಿಲ್ಲ. ಸನಾಯಿಗಿಂತ ಚೂರಷ್ಟೇ ಮೆತ್ತಗಿನ ದನಿಯಲ್ಲಿ ಗೊರಕೆ ಹೊಡೆಯುತ್ತಿದ್ದಾನೆ. ಅವನ ಏಕೈಕ ಸುಪುತ್ರ ಮತ್ತು ಸುಪುತ್ರಿ ಮೋನೇಶಿ ಮತ್ತು ಶಾಂತಿಯರು ಎಂದಿನಂತೆ ತಮ್ಮ ತೀರ್ಥರೂಪನ ಸನಾಯಿ ಶುರು ಆಗುವ ಮೊದಲೇ ಬಂಕದಿಂದ ನಿಕಾಲಿ ಆಗಿ ಹೊರಗಿನ ಕಟ್ಟೆಗೆ ಕೂತು 'ನಮ್ಮ ನಾಡಿದು ನಮ್ಮದು ನಮ್ಮ ಕನ್ನಡ ನಾಡಿದು' ಎಂದು ಜೋರು ದನಿಯಲ್ಲಿ ಪದ್ಯ ಬಾಯಿಪಾಠ ಮಾಡುತ್ತಿದ್ದಾರೆ. ಸನಾಯಿಗೌಡನ ಪತ್ನಿ ಶಾಕುಂತ್ಲಮ್ಮ ಅಡುಗೆ ಮನೆಯಲ್ಲಿ ಸೀಮೆಎಣ್ಣೆ ಖಾಲಿಯಾಗಿರುವುದರಿಂದ ಒಂದಷ್ಟು ಹಾಳೆಗಳ ಸಹಾಯದಿಂದ ಕಟ್ಟಿಗೆಗೆ ಬೆಂಕಿ ಹತ್ತಿಸಲು ಹೆಣಗಾಡುತ್ತಿದ್ದಾಳೆ. ಅವಳ ಮುಟ್ಟಿನ ದಿನ ಆಸುಪಾಸಿನಲ್ಲಿರುವುದರಿಂದ ಎಂದಿಗಿಂತ ಜಾಸ್ತಿ ನೋವು, ಆಕ್ರೋಶ, ಅಸಹಾಯಕತೆಯಿಂದ ಕುದಿಯುತ್ತಿದ್ದಾಳೆ.

ಅದೇ ಕಿಚ್ಚಿನಲ್ಲಿ ಖಾಲಿಯಾಗಿರುವ ಸೀಮೆಎಣ್ಣೆಯನ್ನು, ಹೊತ್ತಿಕೊಳ್ಳದ ಬೆಂಕಿಯನ್ನು, ಖಾಲಿಯಾಗಿ ವಾರವಾಗುತ್ತ ಬಂದರೂ ಸೀಮೆಎಣ್ಣೆ ತಂದುಕೊಡದೆ ಗೊರಕೆ ಹೊಡೆಯುತ್ತ ಬಿದ್ದಿರುವ ಗಂಡನನ್ನು, ತನ್ನನ್ನು ಈತನಿಗೆ ಕಟ್ಟಿ ಕೈತೊಳೆದುಕೊಂಡ ತನ್ನಪ್ಪ ಐಜುಬಲಿ ನಿಂಗಪ್ಪನನ್ನು, ಏನಾದರೊಂದು ಕಿತಿಬಿ ಮಾಡಿ ತನ್ನನ್ನು ಗೋಳುಹೊಯ್ದುಕೊಳ್ಳುವ ಮಕ್ಕಳನ್ನು, ತನ್ನನ್ನು ಹೆಣ್ಣಾಗಿ ಹುಟ್ಟಿಸಿರುವ ದೇವರನ್ನು, ಕಳೆದೈದು ವರ್ಷಗಳಿಂದ ಊರಿಗೆ ಒಕ್ಕರಿಸಿ ಈಗಾಗಲೆ ಹತ್ತಾರು ಜನರು 'ಯಂಡ್ರಲೆಣ್ಣೆ' ಅಂದರೆ ಕ್ರಿಮಿನಾಶಕ ಕುಡಿದು ಸಾಯುವಂತೆ ಮಾಡಿರುವ ಬರವನ್ನು, ಒಟ್ಟಿನಲ್ಲಿ ತನ್ನ ಸುತ್ತಿಡೀ ಸುತ್ತಿಕೊಂಡು ಹಿಂಡಿ ಹಿಪ್ಪೆ ಮಾಡುತ್ತಿರುವ ಈ ಲೋಕವನ್ನು ವಾಚಾಮಗೋಚರವಾಗಿ ಬೈಯುತ್ತ ಊದುಗೊಳವೆ ಊದುತ್ತಿದ್ದಾಳೆ. ಅಂತೂ ಅವಳ ಎಡೆಬಿಡದ ಪ್ರಯತ್ನದಿಂದ ಬೆಂಕಿ ಹೊತ್ತಿಕೊಂಡು ಅವಳ ಬೈಗುಳಗಳು ನಿಲ್ಲುವುದಕ್ಕೂ ಸನಾಯಿಗೌಡ ಮಲಗಿರುವ ಬಂಕದ ಕಡೆಯಿಂದ ಡುರುಕ್ ಎಂದು ಸದ್ದು ಬರುವುದಕ್ಕೂ ಸರಿಹೋಯಿತು. ಇದನ್ನು ತನ್ನಪ್ಪನ ಸುಪ್ರಭಾತದ ಪಲ್ಲವಿಯೆಂದೇ ಭಾವಿಸಿರುವ ಮಕ್ಕಳಿಬ್ಬರೂ ಪದ್ಯ ಬಾಯಿಪಾಠ ನಿಲ್ಲಿಸಿ ಕಿವಿ ಮುಚ್ಚಿಕೊಂಡರು. ಆದರೆ ಶಾಕುಂತ್ಲಮ್ಮ 'ಈ ತೊರಗುತುಣ್ಣೆಯವಂದು ದಿನಾ ಇದ್ದಿದ್ದೇ ಸನಾಯಿ' ಎಂದು ಗೊಣಗಿಕೊಂಡು ಅನ್ನಕ್ಕೆ ನೀರಿಟ್ಟಳು.

ಸಿದ್ಧಪ್ಪ ಇವತ್ತೂ ಸನಾಯಿ ಊದಿ ನಿರಾಳನಾದರೂ ಸದ್ದಿನಲ್ಲಿ ಚೂರು ವ್ಯತ್ಯಯವಾದದ್ದು ಮತ್ತು ಯಾವತ್ತೂ ಇರದಷ್ಟು ಗಬ್ಬು ವಾಸನೆ ಬಂದದ್ದು ಅವನಿಗೆ ಆಶ್ಚರ್ಯ ಉಂಟು ಮಾಡಿತು. ಆ ವಾಸನೆ ಬಂಕ ದಾಟಿ ಕಟ್ಟೆಗೆ ಬಂದು ಶಾಂತಿ ಮೋನೇಶಿಯರಿಗೆ ವಾಂತಿ ಬರಿಸಿತಲ್ಲದೆ, ಅಡುಗೆಮನೆಯಲ್ಲಿರುವ ಶಾಕುಂತ್ಲಮ್ಮನಿಗೂ ತಲೆಚಿಟ್ಟು ಹಿಡಿಸಿತು. ಮೋನೇಶಿ, 'ಸಾಂತಿ ಇದೇನಲೇ ಇಷ್ಟ್ ಗಬ್ ವಾಸನಿ' ಎಂದು ತನ್ನ ಶಾಲೆಯ ತರಗತಿಯಲ್ಲಿ ಯಾರಾದರು ಸದ್ದಿಲ್ಲದ 'ಟಿಸ್ ಮದ್ದು' ಬಿಟ್ಟು ಗಬ್ಬೆಬ್ಬಿಸಿದಾಗ ತಾವು ಮಾಡುತ್ತಿದ್ದಂತೆ ತನ್ನ ಕಾಲಿನ ಹೆಬ್ಬೆಟ್ಟಿನಿಂದ ಮೂಗು ತಿಕ್ಕಿಕೊಳ್ಳುವ ಪ್ರಯತ್ನ ಮಾಡಲಿಕ್ಕೆ ಹೋಗಿ ಅವನ ಹರಿದ ಚಡ್ಡಿಯೊಳಗಿನಿಂದ ಅವನ ಚಿನ್ನಿಕೋಲು ಹೊರಬಿದ್ದು ಸಾಂತಿಗೆ ಹೊಟ್ಟೆಹಿಡಿದುಕೊಳ್ಳುವಷ್ಟು ನಗು ಬಂತು. 'ಯಣ್ಣಾ ನಿನ್ ಗಳಗಂಟಿ ಹೊರಗ್ ಬಂದೇತಿ' ಎಂದು ಕೊಕ್ ಕೊಕ್ ನಗತೊಡಗಿದಳು. ಅವನು ಸಿಟ್ಟುಬಂದು ಅವಳ ತಲೆಗೊಂದು ಕೊಡಲಿಕ್ಕೆ ಹೊರಟದ್ದೇ ಅವಳು ಅಲ್ಲಿಂದೆದ್ದು ತಪ್ಪಿಸಿಕೊಂಡು ಅಪ್ಪನಿದ್ದ ಬಂಕಕ್ಕೆ ಓಡಿಬಂದು ಕಣ್ಣುತಿಕ್ಕಿಕೊಳ್ಳುತ್ತ ನಿಂತಿದ್ದ ಗೌಡನಿಗೆ ಆತು ನಿಂತಳು. 'ಏ ನಿಮ್ಮೌನ್' ಎಂದು ಬೈದುಕೊಳ್ಳುತ್ತ ಬಂದ ಮೋನೇಶಿ ರಾಕ್ಷಸಾಕಾರದ ತನ್ನಪ್ಪನನ್ನು ನೋಡಿದ್ದೇ ಗಪ್ಪಾದ.

ಸಿದ್ದಪ್ಪ, 'ಮುಂಜ್‌ಮುಂಜಲೇ ಏನಲೇ ನಿಂದ್. ಯಾಕ್ ಆ ಉಡುಗೀನ್ ಓಡ್ಯಾಡ್ಸಾಕತ್ತಿ? ಹೋಗ್ ಸುಮ್ ಓದಿಕ್ಯಾ ಹೋಗ್' ಎಂದು ಜಬರಿಸಿದ್ದೇ ಮೋನೇಶಿ ಸಾಂತಿ ಕಡೆಗೊಮ್ಮೆ ಕೆಕ್ಕರಿಸಿ ನೋಡಿ ವಾಪಸ್ಸಾದ. ಸಿದ್ದಪ್ಪ, 'ನೀನೂ ವೋಗ್ ಮುದೇಕಿ' ಎಂದು ಸಾಂತಿಯನ್ನೂ ಕಳಿಸಿದನಾದರೂ ಶಾಂತಿ, 'ನಂದ್ ಮುಗಿತಿ ಓದದು. ಅವ್ವಂತಾಕ್ ಹೋತ್ನಿ' ಎಂದು ಅಡುಗೆ ಮನೆ ಹೊಕ್ಕಳು. ಒಳಗೆ ಶಾಕುಂತ್ಲಮ್ಮ, 'ಈ ಅಡಾವುಡಿ ಇವತ್ ಹೇತ್‌ಗೀತ್‌ಗಂತೋ ಏನ್ ಕತಿನೋ? ಎಷ್ಟ್ ನಾರಾಕತ್ತೇತಿ' ಎಂದು ಗಂಡ ಎಬ್ಬಿಸಿರುವ ಗಬ್ಬುವಾಸನೆಯನ್ನು ಬೈದುಕೊಳ್ಳುತ್ತ ಅಕ್ಕಿ ಹಸನು ಮಾಡುತ್ತಿದ್ದಳು. ಶಾಂತಿ ಅವಳ ಬಳಿ ಹೋದದ್ದೇ 'ನಿಮಪ್ಪಗ್ ಹೇಳು, ಚುಮುಣ್ಯಣ್ಣೆ ಇಲ್ದಂಗ್ ಅಡಿಗಿ ಮಾಡಾಕ್ ತ್ರಾಸಾಕ್ಯೇತಿ ನನಗ' ಎಂದಳು ಗಂಡನಿಗೆ ಕೇಳುವಂತೆ. ಸಿದ್ದಪ್ಪ ಬಂಕದಿಂದಲೇ, 'ಹ್ಞೂ ಇವತ್ ತರ್ತುನ್ ತಗಾ' ಎಂದು ಎಂದಿನಂತೆ ಆಶ್ವಾಸನೆ ಕೊಟ್ಟು ಹೊರಗೆ ಬೀಳಬೇಕು ಎನ್ನುವಷ್ಟರಲ್ಲಿ 'ಸಕ್ರಿ ಮುಗ್ದೇತಿ.. ಅದಕ್ ರಕ್ಕ ಬೇಕ್' ಎಂಬ ಬೇಡಿಕೆಯೂ ಹೊರಬಿತ್ತು. ಸಿದ್ದಪ್ಪ, 'ಆ ರಂಗಮ್ಮನ್ ಅಂಗಡ್ಯಾಗ್ ಉದ್ರಿ ತಗಂಬಾ ನಾ ದಡ್ಡೀಗ್ ಹೋಗ್ತ್ನಿ' ಎಂದ. ಮೊದಲೇ ಒಂದು ಮುಂಜಾನೆಯಿಂದ ಒಲೆಯೊಂದಿಗೆ ಬೆಂಕಿ ಹತ್ತಿಸಲು ಗುದ್ದಾಡಿ ಹೈರಾಣಾಗಿದ್ದ ಶಾಕುಂತ್ಲಮ್ಮನಿಗೆ ಅವನ ಈ ಉದಾಸೀನತೆ ಮತ್ತಷ್ಟು ಸಿಟ್ಟು ಬರಿಸಿತು. 'ನಿನಿಗೆ ಅದನ್ ಬುಟ್ರ ಮತ್ತೇನ್ ಬರ್ತೈತಿ ತಗಾ' ಎಂದಳು ಸಟಕ್ಕನೆ. ಅವನಿಗೆ ಹೋಗಿ ಅವಳ ಬೆನ್ನಿಗೊಂದು ಗುದ್ದಬೇಕು ಎನ್ನುವಷ್ಟು ಬಿಪಿ ರೇಸ್ ಆಯಿತಾದರೂ ಮುಂಜ್ ಮುಂಜನೆ ಏನ್ ಜಗಳ ಅಂದ್ಕೊಂಡು ದೊಡ್ಡ ಚರಿಗೆ ತುಂಬ ಹೂಜಿಯಿಂದ ನೀರು ತುಂಬಿಕೊಂಡು ತನ್ನ ಸವೆದು ಲಡ್ಡಾಗಲಿಕ್ಕೆ ಬಂದಿರುವ ಚಪ್ಪಲಿ ಮೆಟ್ಟಿಕೊಂಡು ಹೊರಟ.

ಸನಾಯಿ ಗೌಡ ಊರ ಅಗಸಿಗೆ ಬಂದ. ಅದೇ ಟೈಮಿಗೆ ಲೋಕಿ, ಲಚುಮ, ಲಿಂಗೇಶರು ಅಲ್ಲೇ ಪಕ್ಕದಲ್ಲಿರುವ ಕಳಕಪ್ಪನ ಹೋಟೆಲಿನ ಕಟ್ಟೆಗೆ ಕೂತು ಇದ್ದೊಂದು ಪೇಪರನ್ನು ಹಂಚಿಕೊಂಡು ಓದುತ್ತಿದ್ದರು. ಹಾಗೆ ನೋಡಿದರೆ ತಮ್ಮ ವಯೋಸಹಜ ಮಂಗ್ಯಾನಾಟಗಳಿಂದಾಗಿ 'ಊರಿಗೆ ಹೆಚ್ಚಾದೋರು' ಎಂಬ ಬಿರುದು ಪಡೆದಿದ್ದ ಈ ಯುವಾಗ್ರೇಸರು ಅಲ್ಲಿಗೆ ಬಂದು ದಿನಾ ಪೇಪರ್ ಹಿಡಿದುಕೊಂಡು ಕೂರುವುದರ ಮುಖ್ಯ ಉದ್ದೇಶ ಅದೇ ದಾರಿಯಲ್ಲಿ ಚೊಂಬು ಹಿಡಿದು ಊರ ಹಿಂದಿರುವ ಹೆಣ್ಣುಮಕ್ಕಳ ಶೌಚಾಲಯಕ್ಕೆ ಹೊರಡುವ ತಮ್ಮ ತಮ್ಮ ಹುಡುಗಿಯರನ್ನು ನೋಡುವುದೇ ಹೊರತು ಪೇಪರ್ ಓದುವುದೊಂದು ನೆಪ ಮಾತ್ರ. ಹೀಗೆ ತಮ್ಮ ಕನಸಿನ ಕಲರ್ ಕಲರ್ ಚೊಂಬುಗಳಿಗಾಗಿ ಕಾತರದಿಂದ ಕಾಯುತ್ತಿದ್ದ ಅವರಿಗೆ ಸ್ಟೀಲಿನ ಚೊಂಬು ಹಿಡಿದು ಬರುತ್ತಿರುವ ಸಿದ್ಧಪ್ಪನ ಸವಾರಿ ಕಣ್ಣಿಗೆ ಬಿತ್ತು.

ಲೋಕಿ ಇಲ್ಲಿಂದಲೇ ಗೌಡನಿಗೆ ಕೇಳುವಂತೆ 'ಏನ್ ಮಾವಾ.. ಇವತ್ ಇಷ್ಟ್ ಲೇಟ್ ಹೊಂಟ್ಬುಟ್ಟಿ? ನಾವ್ ಎಲ್ಲಿ, ನೀನ್ ಕೂಡ ನಿನ್ನೆ ಟೆಂಪದಾಗ್ ಬೆಂಗ್ಳುರಿಗ್ ದುಡ್ಯಾಕ್ ಹೋಗ್ ಬುಟ್ಯನು ಅಂದ್ಕಂಡ್ನಿ?' ಎಂದ. ಸಿದ್ಧಪ್ಪ 'ನಿಮ್ಮೌನ್ ನಾನ್ಯಾಕ್ ಬೆಂಗ್ಳೂರಿಗ್ ಹೋಗ್ಲಲೇ? ನಂಗೇನ್ ಅರ್ಧಾಗ್ಯೇತಂತ ಊರ್ ಬುಟ್ ಹೋಗ್ ದುಡೀಲಿ? ಯಾಕಾ ಇವತ್ ಸ್ವಲ್ಪ್ ತಡ ಆಗ್ಯ್ ಎಚ್ರ್ ಆತ್ ಅಂತ ಈಗ್ ಬಂದ್ನಿ' ಎಂದು ಗತ್ತಿನಿಂದ ಉತ್ತರಿಸಿದ. ಲಚುಮ 'ಆತ್ ಬುಡ್ರಿ ಗೌಡ್ರ. ಮತ್ತೆ ತಮ್‌ತೆಂಡಿಗ್ ಇಲ್ಲೇ ನಮ್ಮೂರ್ ಹಿಂದ್ಕಾ ಹೋಗ್ಬರ್ರಿ. ಸುಮ್ ದಿನಾ ವೋದಂಗ್ ಬೇವೂರಾಗ್ ಕುಂತ್ ಬರಬ್ಯಾಡ್ರಿ' ಎಂದು ನಕಲಿಯಾಡಿದ. ವಾಕಿಂಗ್ ಮಾಡುತ್ತ ಮಾಡುತ್ತ ದಿನವೂ ಪಕ್ಕದೂರಿನ 'ಊರಿಂದ'ಕ್ಕೆ ಹೋಗಿ ಹೇತುಬರುವ ತನ್ನ ಚಾಳಿಯನ್ನು ಆಡಿಕೊಂಡಿದ್ದು ಗೌಡನಿಗೆ ಸಿಟ್ಟು ಬರಿಸಿತು. ಗೌಡ 'ಏ ನಿಮ್ಮೌನ್ ನಾನ್ ಎಲ್ಲ್ಯರ ಹೇಲುತ್ನು ನಿಮ್ಗೇನ್ರಲೇ' ಎಂದು ಅವರನ್ನು ಬೈದು 'ಖಾಲಿ ಸುಳ್ಯಮಕ್ಳು.. ನನಿಗೇ ನಕಲಿ ಮಾಡಕ್ ಬರ್ತಾರ' ಎಂದು ತುಸುಜೋರಾಗೆ ಗೊಣಗಿಕೊಳ್ಳುತ್ತ ಮಾಳಗಡ್ಡಿಯ ದಾರಿ ಹಿಡಿದು ಹೊರಟ.

ಇನ್ನು ಸನಾಯಿಗೌಡ ಮನೆಯಿಂದ ಹೋದರೂ